INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -6, March-April, 2022,
PageNo,69-81
Peer Reviewed Journal, Referred Journal

# ನಾಲ್ವಡಿ ಕೃಷ್ಣರಾಜ ಒಡೆಯರ ರಾಜ್ಯಾಡಳಿತದಲ್ಲಿ ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆ

ಡಾ.ಕೆ.ಗುರುಸ್ವಾಮಿ.[1]

ಮಾರುಕಟ್ಟೆಗಳು ಬಹುಕಾಲದಿಂದಲೂ ಅನ್ನದಾತರಾದ ರೈತರು ಬೆಳೆದ ಅಥವಾ ಉತ್ಪಾದಿಸಿದ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ನೀಡುವ ಕೇಂದ್ರ ಸ್ಥಾನವಾಗಿವೆ. ಇಲ್ಲಿ ರೈತರ ವ್ಯವಸಾಯೋತ್ಪನ್ನಗಳಾದ ಆಹಾರ ಬೆಳೆಗಳು, ವಾಣಿಜ್ಯ ಬೆಳೆಗಳು, ತೋಟಗಾರಿಕಾ ಬೆಳೆಗಳು ಹಾಗೂ ಪಾನೀಯ ಬೆಳೆಗಳಿಗೆ ಬಹಳ ಮಹತ್ವಯುತವಾದ ಪ್ರಾಶಸ್ತ್ಯವನ್ನು ನೀಡಿ ಇವರಿಗೆ ಉತ್ತಮ ಬದುಕನ್ನು ಕಟ್ಟಿಕೊಳ್ಳಲು ಪ್ರೋತ್ಸಾಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೊಡುಕೊಳ್ಳುವ ಆರ್ಥಿಕ ಚಟುವಟಿಕೆಗಳ ಆಗರವಾದ ಮಾರುಕಟ್ಟೆಗಳಲ್ಲಿ 'ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ'ಯ ಮೂಲಕ ರೈತರು ಬೆಳೆದ ಬೆಳೆಗೆ ಉತ್ತಮ ಬೆಲೆಯನ್ನು ನೀಡುವುದರ ಮುಖಾಂತರ ನೆರವು ನೀಡಲಾಗುತ್ತಿದೆ. ಇದಕ್ಕೆ ಮೂಲ ಕಾರಣ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಆಡಳಿತಾವಧಿಯಲ್ಲಿ ಸಂಸ್ಥಾನದ ಆರ್ಥಿಕ ಮೂಲಗಳಲ್ಲಿ ಒಂದಾಗಿದ್ದ ಮಾರುಕಟ್ಟೆಗಳಿಗೆಭದ್ರತೆಯ ಮೂಲಕ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅಭಿವೃದ್ಧಿಗೊಳಿಸಿದ್ದುದೇ ಆಗಿದೆ. ಹೀಗಾಗಿ ಈ ಕಿರು ಸಂಶೋಧನಾ ಪ್ರಬಂಧದಲ್ಲಿ ಮೊದಲಿಗೆ 'ಮಾರುಕಟ್ಟೆ ಪದದ ಅರ್ಥ ಮತ್ತು ಇದರ ವೈಶಿಷ್ಟ್ಯತೆ', 'ನಾಲ್ವಡಿಯವರ ಆಡಳಿತಪೂರ್ವದಲ್ಲಿ ಮೈಸೂರು ಸಂಸ್ಥಾನದಲ್ಲಿದ್ದ ಸಾಂಪ್ರದಾಯಿಕ ಮಾರುಕಟ್ಟೆಗಳು', 'ಸಂಸ್ಥಾನದ ಸಂತೆ–ಜಾತ್ರೆಗಳಿಗೆ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹ', 'ನಾಲ್ವಡಿಯವರ ಮೇಲೆ ಅಲ್ಲಾವುದ್ದೀನ್ ಖಿಲ್ಜಿಯ ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆಯ ಪ್ರಭಾವ','ಸಂಸ್ಥಾನದಲ್ಲಿ ನಾಲ್ವಡಿಯವರ ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆ' ಹಾಗೂ 'ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆ' ಎಂಬ ವಿಷಯಗಳನ್ನುಕುರಿತಾಗಿ ಸವಿವರವಾದ ವಿವರಣೆಯನ್ನು ಪ್ರಸ್ತುತಪಡಿಸಲು ಪ್ರಯತ್ನಿಸಿದ್ದೇನೆ.

- **ಮಾರುಕಟ್ಟೆ ಪದದ ಅರ್ಥ ಮತ್ತು ಇದರ ವೈಶಿಷ್ಟ್ಯತೆ**

'ಮಾರುಕಟ್ಟೆ' ಎಂಬ ಪದ ವಿಶಾಲವಾದ ಅರ್ಥವನ್ನು ಹೊಂದಿರುವ ಪರಿಕಲ್ಪನೆಯಾಗಿದೆ. ಇಂಗ್ಲಿಷ್ ಭಾಷೆಯ 'ಮಾರ್ಕೆಟ್' ಎಂಬ ಪದವು ಲ್ಯಾಟಿನ್ ಭಾಷೆಯ 'ಮಾರ್ಕೆಟಸ್' ಎಂಬ ಪದದಿಂದ

1. ಸಮಾಜ–ವಿಜ್ಞಾನ ಶಿಕ್ಷಕರು ,ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೊಳೆನರಸೀಪುರ, ಹಾಸನ.

ವಿಕಾಸ ಹೊಂದಿದೆ. ಇದರರ್ಥ 'ವ್ಯಾಪಾರ ಮಾಡು', 'ವ್ಯಾಪಾರ ಮಾಡುವ ಸ್ಥಳ', 'ವ್ಯಾಪಾರದ ವಸ್ತು'ಎಂಬುದಾಗಿದೆ. ಸಾಮಾನ್ಯ ಅರ್ಥದಲ್ಲಿ ಮಾರುಕಟ್ಟೆ ಎಂಬುದುರೈತರುಉತ್ಪಾದಿತ ಸರಕುಸೇವೆಗಳನ್ನು ಮಾರುವ ಮತ್ತು ಕೊಳ್ಳುವ ವ್ಯವಹಾರ ನಡೆಯುವ ಸ್ಥಳವಾಗಿದೆ.[1] ಯಾವುದೇ ಒಂದು ಸ್ಥಳದಲ್ಲಿ ಉತ್ಪಾದಿತ ವಸ್ತುವನ್ನು ಮಾರಾಟ ಮಾಡುವ ಉದ್ದೇಶದಿಂದಲೇ ಸಂಗ್ರಹಣೆ ಮಾಡಿದ್ದರೆ ಇದನ್ನು 'ಮಾರುಕಟ್ಟೆ' ಎನ್ನಲಾಗುತ್ತದೆ. ಹೀಗಾಗಿ ಮಾರುಕಟ್ಟೆಯು ಮಾರಾಟಗಾರರು ಹಾಗೂ ಗ್ರಾಹಕರುಗಳು ಮಾಡಿಕೊಳ್ಳುವ ಸಂಗ್ರಹಿತ ವಸ್ತುಗಳ ಪರಸ್ಪರ ವಿನಿಮಯ ಕೇಂದ್ರವಾಗಿದೆ. ಈ ಸ್ಥಳಗಳಲ್ಲಿ ಸದಾ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿದ್ದು, ಒಂದು ಸಂಸ್ಥೆ ಅಥವಾ ವ್ಯವಹಾರದಲ್ಲಿ ನಿಕಟ ಸಂಬಂಧ ಹೊಂದುವುದರ ಮೂಲಕ ದಿನನಿತ್ಯ ಬಳಕೆಯ ವಸ್ತುಗಳಿಗೆ ಸಂಬಂಧಿಸಿದಂತೆ ವ್ಯಾಪಾರ ಚಟುವಟಿಕೆಗಳನ್ನು ನಡೆಸುವುದೇ ಆಗಿದೆ.[2]

ಆರಂಭದಲ್ಲಿ ಈ ಮಾರುಕಟ್ಟೆಗಳು ಸೀಮಿತವಾದ ವ್ಯಾಪ್ತಿಯನ್ನು ಹೊಂದಿದ್ದು, ಸ್ಥಳೀಯವಾಗಿ ಒಂದು ಕಡೆ ನಡೆಯುತ್ತಿದ್ದ ಸಂತೆಗಳು, ಜಾತ್ರೆಗಳೇ ಅಂದಿನ ಮಾರುಕಟ್ಟೆಗಳಾಗಿದ್ದವು. ಏಕೆಂದರೆ ರೈತರು ತಾವು ಬೆಳೆದ ಆಹಾರ ಪದಾರ್ಥಗಳು, ವಾಣಿಜ್ಯ ಬೆಳೆಗಳು ಹಾಗೂ ಹಣ್ಣುಹಂಪಲುಗಳು, ತರಕಾರಿಗಳು, ವಿವಿಧ ಬಗೆಯ ಫಲಪುಷ್ಪಗಳನ್ನು ಇಂತಹ ಸಂತೆ ಹಾಗೂ ಜಾತ್ರೆಗಳಲ್ಲಿ ಯಾವುದೇ ಕಾನೂನಾತ್ಮಕವಾದ ಬೆಲೆಗಳ ನಿಗದಿಯ ಭದ್ರತೆಯಿಲ್ಲದೆ ಸಾಂಪ್ರದಾಯಿಕವಾಗಿ ಮಾರಾಟ ಮಾಡಿಕೊಂಡು ಬಂದ ಲಾಭದಿಂದ ತೃಪ್ತಿಗೊಂಡು ಮನೆಗೆ ತೆರಳುತ್ತಿದ್ದರು. ಇದನ್ನು ಕೃಷಿಯೇತರ ಗೃಹ ಕೈಗಾರಿಕಾ ಉತ್ಪಾದಿತ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದ ಕರಕುಶಲಕರ್ಮಿ ವರ್ಗದ ವ್ಯಾಪಾರಗಾರರು ಪಾಲಿಸುತ್ತಿದ್ದರು. ಇಂತಹ ಚಟುವಟಿಕೆಗಳು ಒಂದು ನಿರ್ದಿಷ್ಟವಾದ ಈ ತೆರೆನಾದ ಸಂದರ್ಭಗಳಿಗೆ ಸೀಮಿತಗೊಂಡಿದ್ದವು.

ಕ್ರಮೇಣ ಮಾನವನ ಆರ್ಥಿಕ ಚಟುವಟಿಕೆಗಳು ವಿಸ್ತಾರವಾದಂತೆಲ್ಲಾ ರೈತರು ಬೆಳೆದ ಮೌಲ್ಯಯುತ ಬೆಳೆಗಳಿಗೆ ಸೂಕ್ತ ಹಾಗೂ ಆಕರ್ಷಕ ಬೆಲೆಗಳನ್ನು ನೀಡುವ ಮಾರುಕಟ್ಟೆಗಳೂ ಕೂಡ ವಿಸ್ತರಣೆಗೊಂಡವು. ಈ ರೀತಿಯದಾದ ವ್ಯಾಪಾರ ವಾಣಿಜ್ಯ ಪ್ರಕ್ರಿಯೆಗಳು ಮೈಸೂರು ಸಂಸ್ಥಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತಾವಧಿಯಲ್ಲಿ ಸರ್ವತೋಮುಖವಾದ ಅಭಿವೃದ್ಧಿಯನ್ನು ಕಂಡಿದ್ದವು. ಇದಕ್ಕೆ ಮೂಲ ಕಾರಣ ನಾಲ್ವಡಿಯವರ ವ್ಯಾಪಾರ ವಾಣಿಜ್ಯ ವಲಯಗಳ ಆರ್ಥಿಕ ಆಧುನೀಕರಣದಬೆಳವಣಿಗೆಯ ಪರಿಕಲ್ಪನೆ ಹಾಗೂಇದನ್ನುಕಾರ್ಯರೂಪಕ್ಕೆ ತರಲು ಮಾಡಿದ ಆಡಳಿತಾತ್ಮಕ ಕಾರ್ಯವೈಖರಿ ಪ್ರಮುಖವಾದುದಾಗಿದೆ.ಇದಕೋಸ್ಕರ ನಾಲ್ವಡಿಯವರು ಸಂಸ್ಥಾನದಲ್ಲಿ 'ನಿಯಂತ್ರಿತ ಮಾರುಕಟ್ಟೆ' (ರೆಗ್ಯುಲೇಟೆಡ್ ಮಾರ್ಕೆಟ್)ಯನ್ನು ಸುವ್ಯವಸ್ಥಿತವಾಗಿ ಅನುಷ್ಠಾನಗೊಳಿಸಿ, ಕೃಷಿ ಭೂಮಿಗಳಲ್ಲಿ ಬೆವರು ಸುರಿಸಿ ದುಡಿಯುತ್ತಿದ್ದ ರೈತಾಪಿ ವರ್ಗಗಳ ಬೆಳೆಗಳಿಗೆ ಸೂಕ್ತ ಬೆಲೆಯನ್ನು

ನೀಡುವಲ್ಲಿ ವಹಿಸಿದ ಪಾತ್ರ ನಿಜಕ್ಕೂ ಅಗ್ರಗಣ್ಯ. ಈ ಹಿನ್ನಲೆಯಲ್ಲಿ ಇವರು ಸಂಸ್ಥಾನದಲ್ಲಿ ನಿಯಂತ್ರಿತ ಮಾರುಕಟ್ಟೆಯನ್ನುಚಾಲನೆಗೊಳಸುವಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಸಾಂಪ್ರದಾಯಿಕ ಮಾರುಕಟ್ಟೆಗಳ ಸ್ಥಳೀಯ ವ್ಯಾಪಾರದ ವಾಸ್ತವಿಕ ರೂಪರೇಷೆಗಳನ್ನು ತಿಳಿಯುವುದು ಅವಶ್ಯಕವಾಗಿದೆ.

- **ನಾಲ್ವಡಿಯವರ ಆಡಳಿತಪೂರ್ವದಲ್ಲಿ ಮೈಸೂರು ಸಂಸ್ಥಾನದಲ್ಲಿದ್ದ ಸಾಂಪ್ರದಾಯಿಕ ಮಾರುಕಟ್ಟೆಗಳು:**

ನಾಲ್ವಡಿಯವರ ರಾಜ್ಯಾಡಳಿತದ ಪೂರ್ವದಲ್ಲಿ ಮೈಸೂರು ಸಂಸ್ಥಾನವು ಒಟ್ಟು ಎಂಟು ಜಿಲ್ಲೆಗಳನ್ನು ಒಳಗೊಂಡಿತ್ತು.ಇವುಗಳನ್ನು ಮೈಸೂರು, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಚಿತ್ರದುರ್ಗ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು (ಕಡೂರು) ಎಂದು ಉಲ್ಲೇಖಿಸಲಾಗಿದೆ.[3] ಈ ಸ್ಥಳಗಳಲ್ಲಿ ಪ್ರಾಚೀನ ಕಾಲದಿಂದಲೂ ಯಾವುದೇ ಒಂದು ವಿಧಿವತ್ತಾದ ಚೌಕಟ್ಟಿಗೊಳಪಡದೆ ಗ್ರಾಮೀಣ ಪ್ರದೇಶಗಳಿಂದ ನಗರಗಳವರೆಗೂ ಹರಡಿಕೊಂಡಿದ್ದ ವಾರದ ಸಂತೆಗಳು, ವಾರ್ಷಿಕ ಜಾತ್ರೆಗಳು, ಅಂಗಡಿ ಮುಂಗಟ್ಟುಗಳೇ ಅಂದಿನ ಸಾಂಪ್ರದಾಯಿಕ ಮಾರುಕಟ್ಟೆಗಳಾಗಿದ್ದವು.[4] ಅಂದು ಸಂಸ್ಥಾನದ ಸಾಂಪ್ರದಾಯಿಕ ಮಾರುಕಟ್ಟೆಗಳ ಆಂತರಿಕ ವ್ಯಾಪಾರದಲ್ಲಿ ಸಂತೆಗಳು ಪ್ರಮುಖ ಪಾತ್ರವನ್ನು ವಹಿಸಿದ್ದವು. ಹಳ್ಳಿಗಳಲ್ಲಿ ಸಂತೆ, ಪಟ್ಟಣಗಳಲ್ಲಿ ಪೇಟೆ ಅಥವಾ ಸಂತೇಪೇಟೆ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು. ಇಲ್ಲಿ ರೈತರು, ಗ್ರಾಹಕರು ಹಾಗೂ ವ್ಯಾಪಾರಿಗಳು ಭಾಗವಹಿಸಿ ಕೊಡುಕೊಳ್ಳುವ ವ್ಯವಹಾರಗಳನ್ನು ನಡೆಸುತ್ತಿದ್ದರು.[5]ಹೀಗಾಗಿ 'ಸಂತೆಗಳು' ಸಂಸ್ಥಾನದ ಸಾಂಪ್ರದಾಯಿಕ ಮಾರುಕಟ್ಟೆಗಳಲ್ಲಿ ಮಹತ್ವಯುತ ಸ್ಥಾನವನ್ನು ಪಡೆದಿದ್ದವು ಎಂದು ಹೇಳಬಹುದು.

'ಸಂತೆ' ಎಂಬ ಪದ ಸಂಸ್ಕೃತ ಭಾಷೆಯ 'ಸಂಸ್ಥಾಸಂಸ್ಥೆ' ಎಂಬುದರಿಂದ ವಿಕಾಸಗೊಂಡಿದೆ. ಇದರರ್ಥ 'ಒಂದು ನಿರ್ದಿಷ್ಟ ಸ್ಥಳ' ಎಂದಾಗುತ್ತದೆ. ಅಂದರೆ ಸ್ಥಳೀಯವಾಗಿ ಒಂದು ಗೊತ್ತಾದ ಸ್ಥಳದಲ್ಲಿ ತಾವು ಬೆಳೆದ ಅಥವಾ ಉತ್ಪಾದಿಸಿದ ಉತ್ಪನ್ನಗಳನ್ನು ಮಾರುವವರು ಹಾಗೂ ಅವುಗಳನ್ನು ಕೊಳ್ಳುವವರು ಒಂದುಗೂಡುವ ವ್ಯವಸ್ಥಿತವಾದಪ್ರದೇಶವಾಗಿತ್ತು.[6] 19ನೇ ಶತಮಾನದ ಆರಂಭದಲ್ಲಿ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ್ದ ಫ್ರಾನ್ಸಿಸ್ ಬುಕಾನನ್‌ರವರು ಕೋಲಾರದ ಮಾಲೂರು ಸಂತೆಗೆ ಭೇಟಿ ನೀಡಿ ಅದಕ್ಕೆ ಸಂಬಂಧಿಸಿದಂತೆ ತಿಳಿಸುತ್ತಾ, 'ಇಲ್ಲಿ ಜನರಿಗೆ ಅಗತ್ಯವಾದ ಎಲ್ಲಾ ವಸ್ತುಗಳ ಲಭ್ಯವಿದೆ. ಕಚ್ಚಾ ಹತ್ತಿ, ಕಂಬಳಿಗಳು, ದಿನನಿತ್ಯ ಕೃಷಿ ಹಾಗೂ ಗೃಹ ಬಳಕೆಯ ಲೋಹಗಳಿಂದ ಮಾಡಲ್ಪಟ್ಟ ಪರಿಕರಗಳು ಮತ್ತು ವಿವಿಧ ಬಗೆಯ ವಸ್ತುಗಳು ಮಾರಾಟವಾಗುತ್ತವೆ. ಹೀಗಾಗಿ ಸುತ್ತಮುತ್ತಲಿನ ಜನರು ವಾರದ ಸಂತೆಗಳಿಗೆ ಬಂದು ಅಗತ್ಯ ವಸ್ತುಗಳನ್ನು ಖರೀದಿಸುತ್ತಾರೆ'ಎಂದು ತಮ್ಮ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ. ಮುಂದುವರಿದು ಈ ಸಂತೆಗಳಿಗೆ ಪ್ರತಿಯೊಂದು ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಅವಕಾಶ ಕಲ್ಪಿಸಿಕೊಡಲಾಗಿತ್ತು. ಕೆಲವು ಪ್ರಮುಖ ಸ್ಥಳಗಳಲ್ಲಿ ಎರಡರಿಂದ ಮೂರು ಮೈಲಿಗಳ ಅಂತರದಲ್ಲಿ ಈ ತೆರನಾದ ಸಂತೆಗಳು ಕಟ್ಟಲ್ಪಡುತ್ತಿದ್ದವು. ಸುತ್ತಮುತ್ತಲಿನ ಪ್ರದೇಶದ ರೈತರು ಬೆಳೆದ

ವ್ಯವಸಾಯೋತ್ಪನ್ನಗಳು, ಕರಕುಶಲ ವಸ್ತುಗಳು, ಗುಡಿ ಕೈಗಾರಿಕೆಗಳಿಂದ ಉತ್ಪಾದಿಸಿದ ವಸ್ತುಗಳನ್ನು ಈ ಸಂತೆಗಳಿಗೆ ತಂದು ಅಲ್ಲಿದ್ದ ಮಧ್ಯವರ್ತಿಗಳಿಗೆ ಅಥವಾ ದಲ್ಲಾಳಿಗಳಿಗೆ ಮಾರಾಟ ಮಾಡಿ ಹಣ ಪಡೆದು ಮನೆಗೆ ಹಿಂದಿರುಗುತ್ತಿದ್ದರು. ಏಕೆಂದರೆ ಕೆಲವು ದೊಡ್ಡದೊಡ್ಡ ವರ್ತಕರುಗಳು ತಮ್ಮ ಮಧ್ಯವರ್ತಿಗಳ ಮೂಲಕ ರೈತರ ಬೆಳೆ ಕೊಯ್ಲಿಗೆ ಬರುವುದಕ್ಕೆ ಮೊದಲೇ ಅವರಿಗೆ ಮುಂಗಡ ಹಣ ನೀಡಿ ಬೆಳೆಯನ್ನು ಕಾಯ್ದಿರಿಸುತ್ತಿದ್ದರು. ಹೀಗಾಗಿ ಹೆಚ್ಚಿನ ಬಂಡವಾಳವನ್ನು ಹೊಂದಿದ್ದ ವರ್ತಕರು ಈ ತೆರನಾದ ಸಂತೆಗಳನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದರು.[7]

ಆದರೂ ಸಂತೆಗಳು ಟಿಪ್ಪುವಿನ ಕಾಲದಲ್ಲಿ ಹಾಗೂ ಚಿಕ್ಕದೇವರಾಜ ಒಡೆಯರು ಮತ್ತು ನಂತರದ ಒಡೆಯರುಗಳ ಆಡಳಿತಾವಧಿಯಲ್ಲಿ ಹೆಚ್ಚಿನ ರೀತಿಯಲ್ಲಿ ರೂಪುಗೊಂಡು ರಾಜ್ಯದ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದವು. ಅದರಲ್ಲೂ ಟಿಪ್ಪುವೂ ಕೂಡ ಶ್ರೀರಂಗಪಟ್ಟಣ ಹಾಗೂ ಮೈಸೂರು ವ್ಯಾಪ್ತಿಯಲ್ಲಿ ಈ ಸ್ಥಳೀಯ ವ್ಯಾಪಾರ ಚಟುವಟಿಕೆಗಳನ್ನುವೃದ್ಧಿಸಲು ಪ್ರೋತ್ಸಾಹ ನೀಡಿದ್ದರಿಂದ ವಿದೇಶಿಯರ ಗಮನವನ್ನು ಸೆಳೆದಿತ್ತು. ಆದ್ದುದರಿಂದ ಇವರುಈ ವ್ಯಾಪಾರ ಕೇಂದ್ರಗಳನ್ನು ಹಳ್ಳಿಗಳನ್ನು ಒಳಗೊಂಡಂತೆ ಸಂತೆಪೇಟೆ ಅಥವಾ ಪಟ್ಟಣಪೇಟೆಗಳನ್ನು ವಿಸ್ತರಿಸಲು ಗಮನಹರಿಸಿದ್ದರು. ಈ ಪ್ರಕ್ರಿಯೆ ನಾಲ್ವಡಿಯವರ ಕಾಲಾವಧಿಯಲ್ಲಿಯೂ ಮುಂದುವರಿದಿತ್ತು.

- **ಸಂಸ್ಥಾನದ ಸಂತೆ–ಜಾತ್ರೆಗಳಿಗೆ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹ**:

ನಾಲ್ವಡಿಯವರು ಕೂಡ ಸಂತೆ ಹಾಗೂ ಜಾತ್ರೆಗಳ ಆರ್ಥಿಕ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ತಮ್ಮ ಗಮನದಲ್ಲಿಟ್ಟುಕೊಂಡು ಸಂಸ್ಥಾನದಲ್ಲಿ ಅವುಗಳ ಪ್ರಗತಿಗೆ ಉತ್ತಮವಾದ ವೇದಿಕೆಯನ್ನು ಕಲ್ಪಿಸಿಕೊಟ್ಟಿದ್ದರು. ಹೀಗಾಗಿ ಈ ಸಂತೆ, ಜಾತ್ರೆಗಳು ಸ್ಥಳೀಯ, ದೇಶೀಯ ಹಾಗೂ ವಿದೇಶಿಯರುಗಳನ್ನು ಕೃಷಿಯೋತ್ಪನ್ನಗಳು, ವಾಣಿಜ್ಯೋತ್ಪನ್ನಗಳು, ಮಸಾಲೆ ಪದಾರ್ಥಗಳು, ಹಣ್ಣುತರಕಾರಿಗಳು, ಕಣ್ಮನಗಳನ್ನು ಸೆಳೆಯುವ ಸುವಾಸನೆಯುಕ್ತ ನಗೆಯನ್ನು ಸೂಸುವ ತರತರದ ಹೂವುಗಳು, ಪುಷ್ಪಮಾಲಿಕೆಗಳು, ಕರಕುಶಲಕಲೆಯಿಂದ ನಿರ್ಮಾಣ ಮಾಡಿದ ಆಟೋಪಕರಣಗಳು, ಸುವಾಸನೆ ನೀಡುವ ಅಲಂಕಾರಿಕ ಪದಾರ್ಥಗಳು, ಗಮಗಮಿಸುವ ತಿಂಡಿತಿನಿಸುಗಳ ಮೂಲಕ ತನ್ನೆಡೆ ಸೆಳೆಯುವಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತಿದ್ದವು.

ನಾಲ್ವಡಿಯವರು ನೀರಾವರಿ ಕ್ಷೇತ್ರಕ್ಕೆ ನೀಡಿದ್ದ ಕೊಡುಗೆಗಳಿಂದಈ ಕಾಲದ ವ್ಯಾಪಾರದಲ್ಲಿ ವ್ಯವಸಾಯವು ಪ್ರಥಮ ಸ್ಥಾನವನ್ನು ಪಡೆದಿದ್ದು ಆಹಾರ ಪದಾರ್ಥಗಳು, ವಾಣಿಜ್ಯ ಬೆಳೆಗಳು ಬಹುಮುಖ್ಯವಾದ ವ್ಯಾಪಾರ ಸರಕುಗಳಾಗಿದ್ದವು. ಭತ್ತ, ರಾಗಿ, ಜೋಳ, ಕಬ್ಬು, ಬೇಳೆಕಾಳುಗಳು, ಎಣ್ಣೆಕಾಳುಗಳು, ಹೊಗೆಸೊಪ್ಪು, ಹತ್ತಿಬಟ್ಟೆ, ನೂಲು, ಬೆಲ್ಲ, ಸಕ್ಕರೆ, ವೀಳ್ಯದೆಲೆ, ಅಡಿಕೆ, ಉಪ್ಪು, ಉದ್ದು,

ಮೆಣಸು, ಚೆಕ್ಕೆ, ಲವಂಗ, ಅರಗು, ಕಚ್ಚಾ ರೇಷ್ಮೆ, ಕಾಫಿ, ತೆಂಗಿನಕಾಯಿ, ಕೊಬ್ಬರಿ ಮೊದಲಾದ ದಿನನಿತ್ಯ ಬಳಸುವ ಮೂಲ ಪದಾರ್ಥಗಳು ಸಂಸ್ಥಾನದ ಸಂತೆಗಳಲ್ಲಿ ಲಭಿಸುತ್ತಿದ್ದವು. ಅಲ್ಲದೆ ಇಲ್ಲಿನ ಶ್ರೀಗಂಧ ಮರದ ತುಂಡುಗಳಿಗೆ ಯೂರೋಪಿಯನ್ನರಿಂದ ಉತ್ತಮವಾದ ಬೇಡಿಕೆಯಿದ್ದುದರಿಂದಲೇ ಇದು ಸಂಸ್ಥಾನದ ಅಂತರರಾಷ್ಟ್ರೀಯ ವಾಣಿಜ್ಯ ಮತ್ತು ವ್ಯಾಪಾರದ ಅಭಿವೃದ್ಧಿಗೆ ಪೂರಕವಾಗಿತ್ತು.[8] ಈ ಪದಾರ್ಥಗಳನ್ನು ಸಂಸ್ಥಾನದ ಸಂತೆಗಳಲ್ಲಿ ಮಾರಾಟ ಪ್ರಕ್ರಿಯೆಗಳಲ್ಲಿ ತೊಡಗಿದ್ದ ಪ್ರಮುಖ ವ್ಯಾಪಾರಿ ವರ್ಗಗಳೆಂದರೆ, ಬಣಜಿಗರು, ಕೋಮಟಿಗರು, ನಗರ್ತರು, ತಮಿಳು ಮೊದಲಿಯಾರರು, ಮುಸಲ್ಮಾನರು, ತೆಲುಗು ಶೆಟ್ಟರು, ದೇವಾಂಗ ಶೆಟ್ಟರು, ಲಿಂಗಾಯತರು, ವೈಶ್ಯರು, ಒಕ್ಕಲಿಗರು ಮುಂತಾದವರು ಪ್ರಮುಖರು. ಇವರುಗಳು ಹತ್ತಿ ಬಟ್ಟೆ ಮತ್ತು ರೇಷ್ಮೆ ಬಟ್ಟೆ ಕೈಗಾರಿಕೆಗಳನ್ನು ನಡೆಸುತ್ತಿದ್ದರಲ್ಲದೆ, ಇವುಗಳ ಸಿದ್ಧ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದರು. ಅಲ್ಲದೆ ಇವರು ಪಾನೀಯ ಬೆಳೆಯಾದ ಕಾಫಿ ಕೃಷಿಯನ್ನು ಮಾಡುತ್ತಿದ್ದರು.[9]

ಬಹುಕಾಲದಿಂದಲೂ ಗ್ರಾಮೀಣ ಕರಕುಶಲಕರ್ಮಿಗಳ ಬದುಕು ಸಂಪೂರ್ಣವಾಗಿ ಸಂತೆಯನ್ನೇ ಅವಲಂಬಿಸಿದ್ದವು. ಹಚ್ಚೆ ಹಾಕುವವರು, ಕುಂಬಾರರು, ಕಮ್ಮಾರರು, ಬಳೆಗಾರರು, ದರ್ಜಿಗಳು, ಲಾಳ ಹೊಡೆಯುವವರು, ಬಡಗಿಗಳು, ಪುಟ್ಟಮಕ್ಕಳ ಆಟಿಕೆಗಳನ್ನು ತಯಾರಿಸಿ ಮಾರುವವರು ಸಂತೆಯಿಂದ ಸಂತೆಗೆ ತಮ್ಮ ಜೀವನವನ್ನು ಕಟ್ಟಿಕೊಳ್ಳುತ್ತಿದ್ದರು. ಮೈಸೂರು ಸಂಸ್ಥಾನದ ಆಗಿನ ಸಂತೆಯಾಧರಿತ ಪ್ರಮುಖ ವ್ಯಾಪಾರ ಕೇಂದ್ರಗಳೆಂದರೆ, ಮೈಸೂರು, ಬೆಂಗಳೂರು, ಶ್ರೀರಂಗಪಟ್ಟಣ, ತುಮಕೂರು, ತಿಪಟೂರು, ಮಂಡ್ಯ, ಎಡತೊರೆ, ಹುಣಸೂರು, ಚಾಮರಾಜನಗರ, ಟಿ. ನರಸೀಪುರ, ತಲಕಾಡು, ನಂಜನಗೂಡು, ಹೊಳೆನರಸೀಪುರ, ಹಾಸನ, ಚಿತ್ರದುರ್ಗ, ಕಳಲೆ, ಗುಂಡ್ಲುಪೇಟೆ, ದೇವನಹಳ್ಳಿ ಮುಂತಾದವುಗಳು. ಇವುಗಳಲ್ಲಿ ಚನ್ನಪಟ್ಟಣವು ಕೃಷಿ ಉತ್ಪನ್ನಗಳು ಹಾಗೂ ಚಿಕ್ಕಮಕ್ಕಳುಗಳ ಮರದ ಆಟಿಕೆಗಳು, ಬೊಂಬೆ ಸಾಮಾನುಗಳ ಮಾರಾಟ ಕೇಂದ್ರವಾಗಿದ್ದು, ಇಲ್ಲಿಗೆ ನಾನಾ ಕಡೆಗಳಿಂದ ವ್ಯಾಪಾರಿಗಳು ಬರುತ್ತಿದ್ದರು. ಈ ಸ್ಥಳಗಳಲ್ಲಿ ಹೊರಗಿನಿಂದ ಬರುವ ವ್ಯಾಪಾರಿಗಳು, ವರ್ತಕರು ಉಳಿದು ವಿಶ್ರಾಂತಿ ಪಡೆಯಲು ಏರ್ಪಾಡುಗಳನ್ನು ಮಾಡಲಾಗುತ್ತಿತ್ತು.[10]

ಸಂತೆಗಳಲ್ಲದೆ 'ಜಾತ್ರೆಗಳು' ಕೂಡ ವರ್ಷಕ್ಕೊಂದು ಬಾರಿ ಗ್ರಾಮದೇವತೆಗಳ ಹಬ್ಬದ ರಥೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ ನಡೆಯುತ್ತಿದ್ದವು. ಜಾತ್ರೆಗಳಲ್ಲಿ ಮಾರಾಟವಾಗುವ ವಸ್ತುಗಳು ಸಂತೆಗಳಲ್ಲಿ ಸಿಗುವ ವಸ್ತುಗಳಿಗಿಂತ ಭಿನ್ನವಾಗಿರುತ್ತಿದ್ದವು. ಸಾಮಾನ್ಯವಾಗಿ ಸಂತೆಗಳಲ್ಲಿ ನಿತ್ಯಬಳಕೆಯ ವಸ್ತುಗಳು ಮಾರಾಟವಾಗುತ್ತಿದ್ದವು. ಜಾತ್ರೆಗಳಲ್ಲಿ ಮಾತ್ರ ಬಹುಕಾಲ ಬಾಳುವ ಹಿತ್ತಾಳೆ ಪಾತ್ರೆಗಳು, ಸಿದ್ಧ ಉಡುಪುಗಳು, ವಿವಿಧ ರೀತಿಯ ಪಾದರಕ್ಷೆಗಳು, ಗಾಜಿನ ಆಟಿಕೆಗಳು, ಮಕ್ಕಳ ಆಟದ ಸಾಮಾನುಗಳು, ಮಣಿಸರಗಳು, ಅಲಂಕಾರಿಕ ವಸ್ತುಗಳು, ಹಾಗೆಯೇ ಮನರಂಜನೆಯುಕ್ತ ಆಟೋಟಗಳು, ಕ್ರೀಡೆಗಳು,

ಸ್ಪರ್ಧೆಗಳು ಏರ್ಪಾಡಾಗುತ್ತಿದ್ದವು.[11]ಇಂತಹ ಜಾತ್ರೆಗಳು ಪುರಾಣ ಪ್ರಸಿದ್ಧತೆಯನ್ನು ಹೊಂದಿರುವ ದೇವಾಲಯಗಳು, ದೇವಸ್ಥಾನಗಳು, ಗುಡಿದೇಗುಲಗಳು ಇದ್ದ ಕೇಂದ್ರಸ್ಥಳಗಳ ಮುಖ್ಯದ್ವಾರಗಳ ವ್ಯಾಪ್ತಿಯಲ್ಲಿ ನಡೆಯುತ್ತಿದ್ದವು. ಅಂತಹ ಜಾತ್ರೆಗಳಿಗೆ ಪ್ರಮುಖವಾಗಿ ಉದಾಹರಣೆ ನೀಡುವುದಾದರೆ ಮೈಸೂರಿನ ಚಾಮುಂಡಿಬೆಟ್ಟದ ಜಾತ್ರೆ, ನಂಜನಗೂಡಿನ ಶ್ರೀಕಂಠೇಶ್ವರ ರಥೋತ್ಸವದ ಜಾತ್ರೆ, ಮಲೈ ಮಹಾದೇಶ್ವರಸ್ವಾಮಿ ಜಾತ್ರೆ, ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ಜಾತ್ರೆ, ಬಿಳಿಗಿರಿರಂಗನಬೆಟ್ಟದ ಜಾತ್ರೆ, ಅರಕಲಗೂಡಿನ ರಾಮನಾಥಪುರದ ಶ್ರೀ ಪ್ರಸನ್ನಸುಬ್ರಮಣ್ಯಸ್ವಾಮಿ ಜಾತ್ರೆ, ಪಿರಿಯಾಪಟ್ಟಣದ ಜಾತ್ರೆಗಳು, ಸೋಮನಾಥಪುರದ ಜಾತ್ರೆ, ಎಡತೊರೆ ಜಾತ್ರೆ, ಚಾಮರಾಜನಗರ ಜಾತ್ರೆ, ಚುಂಚನಕಟ್ಟೆ, ಬನ್ನೂರು ಜಾತ್ರೆ, ತಲಕಾಡು ಜಾತ್ರೆ, ತಿರುಮಕೂಡಲು ನರಸೀಪುರ ಜಾತ್ರೆ, ಹೊಳೆನರಸೀಪುರ ಜಾತ್ರೆಗಳುಬಹಳ ಪ್ರಮುಖವಾದ ಜಾತ್ರೆಗಳಾಗಿದ್ದವು. ಇವುಗಳ ಜೊತೆಜೊತೆಗೆನಡೆಯುತ್ತಿದ್ದ 'ಜಾನುವಾರು ಜಾತ್ರೆಗಳು' ಕೂಡ ಬಹಳ ಪ್ರಧಾನವಾದ ಜಾತ್ರೆಗಳಾಗಿದ್ದವು. ಅವುಗಳಲ್ಲಿ ಕೆ.ಆರ್.ನಗರದ(ಕೃಷ್ಣರಾಜನಗರ) ಚುಂಚನಕಟ್ಟೆ ಜಾನುವಾರು ಜಾತ್ರೆ, ಅರಕಲಗೂಡಿನ ರಾಮನಾಥಪುರದ ಜಾನುವಾರು ಜಾತ್ರೆ, ಘಾಟಿ ಸುಬ್ರಮಣ್ಯ ದನಗಳ ಜಾತ್ರೆ ಮುಂತಾದವುಗಳು ಏರ್ಪಡುತ್ತಿದ್ದವು.[12] ಇಂತಹ ಜಾತ್ರೆಗಳಲ್ಲಿ ದೇವರ ದರ್ಶನವನ್ನು ಮಾಡಿ ಸರಕುಸರಂಜಾಮುಗಳನ್ನು ಕೊಂಡುಕೊಳ್ಳಲು ಸಾವಿರಾರು ಮಂದಿ ನಾಗರಿಕರು ಸಂಸ್ಥಾನದ ವಿವಿದೆಡೆಗಳಿಂದ ಬಂದು ಸೇರುತ್ತಿದ್ದರು. ಜೊತೆಗೆ ಸ್ಥಳೀಯವಾಗಿ ಮಾತ್ರವಲ್ಲದೆ ನೆರೆಯ ಮದ್ರಾಸ್ ಹಾಗೂ ಬಾಂಬೆ ಪ್ರಾಂತ್ಯಗಳಿಂದಲೂ ಜಾನುವಾರುಗಳ ಖರೀದಿಗಾಗಿ ಗ್ರಾಹಕರು ಹಾಗೂ ವರ್ತಕರುಗಳು ಈ ಜಾತ್ರೆಗಳಿಗೆ ಬರುತ್ತಿದ್ದರು.

ಹೀಗೆ ಸಂತೆಗಳು ಹಾಗೂ ಜಾತ್ರೆಗಳು ಸಂಸ್ಥಾನದ ಆರ್ಥಿಕ ಬೆಳವಣಿಗೆಗೆ ಪೂರಕವಾಗಿದ್ದಂತೆ, ಇಲ್ಲಿಗೆ ಬರುತ್ತಿದ್ದ ಗ್ರಾಮೀಣ ಜನರ ಸಾಂಸ್ಕೃತಿಕ ಕಲಾ ಪ್ರದರ್ಶನದ ವೇದಿಕೆಗಳಾಗಿ ಕಂಗೊಳಿಸುತ್ತಿದ್ದವು. ಇಂತಹ ಸಂತೆ ಮತ್ತು ಜಾತ್ರೆಗಳ ರಾತ್ರಿಯ ಅವಧಿಯಲ್ಲಿ ಪೌರಾಣಿಕ ನಾಟಕಗಳು, ಕೋಲಾಟ, ನೀಲಗಾರರ ಹಾಡು, ತಮಟೆ ಸದ್ದಿನ ನಾದ, ಜಾನಪದ ನೃತ್ಯ, ಹಾಡುಗಳು ಬೆಳಗ್ಗೆಯಿಂದ ಸಂಜೆಯವರೆಗೂ ಒತ್ತಡಭರಿತ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿದ್ದ ಗ್ರಾಹಕರು, ಮಾರಾಟಗಾರರು, ವರ್ತಕರು, ವ್ಯಾಪಾರಿಗಳು ಮತ್ತು ಸಾರ್ವಜನಿಕರುಗಳ ಮನಸ್ಸಿಗೆ ಸಂತಸ, ನೆಮ್ಮದಿಯನ್ನು ತಂದುಕೊಡುತ್ತಿದ್ದವು.[13]ಹೀಗೆ ಸಂತೆ ಮತ್ತು ಜಾತ್ರೆಗಳು ಅಂದಿನ ಜನತೆಯ ಅಗತ್ಯ ವಸ್ತುಗಳನ್ನು ಪೂರೈಸುತ್ತಿದ್ದುವಲ್ಲದೆ ಹಳ್ಳಿಗಳು ದೊಡ್ಡದೊಡ್ಡ ಪಟ್ಟಣಗಳಾಗಿ ಬೆಳೆದು ಸಂಸ್ಥಾನದಾದ್ಯಂತ ಜನನಿಬಿಡ ಮಾರುಕಟ್ಟೆಗಳು ಉಗಮವಾಗಲು ಕಾರಣವಾದವು. ಅಂತಹ ಮಾರುಕಟ್ಟೆಗಳಲ್ಲಿ ಬೆಂಗಳೂರಿನ ಕೃಷ್ಣರಾಜೇಂದ್ರ ಮಾರುಕಟ್ಟೆ (ಕೆ.ಆರ್. ಮಾರ್ಕೆಟ್), ಮೈಸೂರಿನ ದೇವರಾಜ ಮಾರುಕಟ್ಟೆ, ವಾಣಿವಿಲಾಸ ಮಾರುಕಟ್ಟೆ, ಹಳೆ ಮೈಸೂರಿನ ಮಂಡಿ ಮಾರುಕಟ್ಟೆ ಪ್ರಮುಖವಾದವುಗಳು.[14] ಹೀಗಾಗಿ ಇಲ್ಲಿಗೆ ವಿವಿಧ ವೃತ್ತಿಯನ್ನು ಮಾಡುವ ವರ್ಗಗಳು, ಕಸುಬುದಾರರು, ವ್ಯಾಪಾರಿಗಳು, ವರ್ತಕರು, ಉದ್ಯೋಗಿಗಳು

ಬಂದು ನೆಲೆಸುತ್ತಿದ್ದುದರಿಂದ ಸಂಸ್ಥಾನದ ರಾಜಪ್ರಭುತ್ವದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಹೆಚ್ಚಿನ ಆದಾಯ ಬಂದು ಸೇರುತ್ತಿತ್ತು. ಈ ದಿಸೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಸಂಸ್ಥಾನದಲ್ಲಿ ಆಯೋಜನೆಗೊಳ್ಳುತ್ತಿದ್ದ ಸಂತೆ ಮತ್ತು ಜಾತ್ರೆಗಳು ಪ್ರವಾಹೋಪಾದಿಯಲ್ಲಿ ಅಗತ್ಯ ವಸ್ತುಗಳ ಬಳಕೆ ಮಾಡುವ ಜನಸಾಗರವನ್ನು ಸೇರಿಸುತ್ತಿದ್ದುದನ್ನು ಮನಗಂಡರು. ಹೀಗಾಗಿ ಇಂತಹ ಮಾರುಕಟ್ಟೆಗಳನ್ನು ಆಧುನೀಕರಣಗೊಳಸುವಸಲುವಾಗಿ ಸುವ್ಯವಸ್ಥಿತ ಕಾನೂನಿನ ನೀತಿನಿಯಮಗಳ ಪಾಲನೆಯ 'ನಿಯಂತ್ರಿತ ಮಾರುಕಟ್ಟೆ'ವ್ಯವಸ್ಥೆಯನ್ನು ಜಾರಿಗೊಳಸಲು ಮುಂದಾದರು. ನಾಲ್ವಡಿಯವರ ರೈತರು, ವ್ಯಾಪಾರಿಗಳು ಹಾಗೂ ಖರೀದಿದಾರರ ಹಿತರಕ್ಷಣೆಯ ನಿಯಂತ್ರಿತ ಮಾರುಕಟ್ಟೆಯ ಪರಿಕಲ್ಪನೆಯ ಮೇಲೆ ಸುಪ್ರಸಿದ್ಧ ದೆಹಲಿ ಸುಲ್ತಾನ ಖಿಲ್ಜಿ ಸಂತತಿಯ ಅಲ್ಲಾವುದ್ದೀನ್ ಖಿಲ್ಜಿಯು ಅನುಷ್ಠಾನಗೊಳಸಿದ್ದಶಿಸ್ತುಬದ್ಧ ಕಟ್ಟುನಿಟ್ಟಿನ ನಿಯಂತ್ರಿತ ಮಾರುಕಟ್ಟೆಯ ಪ್ರಭಾವವು ಇತ್ತೆಂದು ಹೇಳಬಹುದು.

- **ನಾಲ್ವಡಿಯರವರ ಮೇಲೆ ಅಲ್ಲಾವುದ್ದೀನ್ ಖಿಲ್ಜಿಯ ನಿಯಂತ್ರಿತ ಮಾರುಕಟ್ಟೆವ್ಯವಸ್ಥೆಯ ಪ್ರಭಾವ:**

ಅಲ್ಲಾವುದ್ದೀನ್ ಖಿಲ್ಜಿಯು(1296–1316) ದೆಹಲಿ ಸುಲ್ತಾನರಲ್ಲೇ ಅತ್ಯಂತ ಪ್ರಖ್ಯಾತಿಯನ್ನು ಗಳಸಿದ್ದ ಸುಲ್ತಾನನಾಗಿದ್ದನು. ಈತನನ್ನು ವಿದೇಶೀಯ ಪ್ರವಾಸಿಗ ಲೇನ್‌ಪೋಲ್‌ರವರು 'ರಾಜಕೀಯ ಆರ್ಥಿಕ ತಜ್ಞ'ಎಂದು ಸಂಬೋಧಿಸಿರುವುದು ಆತನ ಮಾದರಿಯುಕ್ತ ಸುವ್ಯವಸ್ಥಿತ ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.[15] ಇಡೀ ಭಾರತ ದೇಶವನ್ನು ಆಳ್ವಕೆ ನಡೆಸಿದ ಸಾವಿರಾರು ರಾಜಪ್ರಭುತ್ವಗಳ ದಕ್ಷ ಆಡಳತದ ಬೆನ್ನೆಲುಬು ಮತ್ತು ಆಧಾರ ಸ್ತಂಭ ಅವರ ಸೈನಿಕ ವ್ಯವಸ್ಥೆ. ಇವರು ಸದಾಕಾಲ ಸ್ಥಳೀಯ, ದೇಶೀಯ, ವಿದೇಶೀಯ ಶತ್ರುಗಳ ಆಕ್ರಮಣದಿಂದ ಸಾಮ್ರಾಜ್ಯವನ್ನು ರಕ್ಷಿಸುವ ಹಾಗೂ ರಾಜ್ಯದ ಸಾಮಾನ್ಯ ಪ್ರಜೆಗಳ ಪ್ರಾಣವನ್ನು ಕಾಪಾಡುವ ಮಹತ್ತರ ಜವಾಬ್ದಾರಿಯನ್ನು ವಹಿಸಿದ್ದರು. ಹೀಗಾಗಿ ಈ ಸೈನ್ಯ ವ್ಯವಸ್ಥೆಗೆ ಮೂಲ ಸೌಲಭ್ಯಗಳಾದ ಆಹಾರ, ಕುಡಿಯುವ ನೀರು, ವಸತಿ, ಸಂಬಳ, ಸಮವಸ್ತ್ರ, ಯುದ್ಧೋಪಕರಣಗಳ ಸರಬರಾಜು, ನೈಸರ್ಗಿಕ ವಿಪತ್ತುಗಳ ಸಂದರ್ಭದಲ್ಲಿ ಸರ್ವರ ಸಂರಕ್ಷಣೆ ಮತ್ತು ಆರ್ಥಿಕ ನೆರವುಗಳನ್ನು ನೀಡಿ ಬಹಳ ಜಾಗರೂಕತೆಯಿಂದ ನಿರ್ವಹಣೆ ಮಾಡಬೇಕಾದದ್ದು ಪ್ರತಿಯೊಬ್ಬ ರಾಜನ ಅಥವಾ ಸುಲ್ತಾನನ ಕರ್ತವ್ಯವಾಗಿತ್ತು.

ಹೀಗಾಗಿ ಅಲ್ಲಾವುದ್ದೀನ್ ಖಿಲ್ಜಿಯು ತನ್ನ ಸೈನಿಕರಿಗೆ ಈ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮುಂದಾದನು. ಈ ಹಿನ್ನಲೆಯಲ್ಲಿ ಅಲ್ಲಾವುದ್ದೀನ್ ಖಿಲ್ಜಿಯು ಸೈನಿಕರಿಗೆ ದಿನನಿತ್ಯದ ಆಹಾರ ಪದಾರ್ಥಗಳು, ದಿನಬಳಕೆಯ ವಸ್ತುಗಳನ್ನು ಸರಬರಾಜು ಮಾಡುತ್ತಾ, ರಾಜ್ಯದ ಆದಾಯದ ಮೂಲಗಳಲ್ಲಿ ಒಂದಾಗಿದ್ದ ಮಾರುಕಟ್ಟೆಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಸರಕುಸೇವೆಗಳನ್ನು ಸರ್ವಸಾಮಾನ್ಯರಿಗೂ ರಿಯಾಯಿತಿ ದರಗಳಲ್ಲಿ ಮೋಸರಹಿತವಾಗಿ ನೀಡುವಂತೆ

ಮಾಡಲು 'ನಿಯಂತ್ರಿತ ಮಾರುಕಟ್ಟೆ' ಸುಧಾರಣಾ ಕಾಯ್ದೆಯನ್ನು ಜಾರಿಗೊಳಿಸಿದನು.[16]ನಿಯಂತ್ರಿತ ಮಾರುಕಟ್ಟೆಯು ಜನಪರವಾಗಿ ಕಾರ್ಯನಿರ್ವಹಿಸಲು 'ಷಹನಾ-ಇ-ಮಂಡಿ' ಎಂಬ ಈ ಮಾರುಕಟ್ಟೆಗಳ ಮೇಲ್ವಿಚಾರಕರನ್ನು, ಇವುಗಳ ಮೇಲೆ ಆಡಳಿತದ ನಿಯಂತ್ರಣವನ್ನಿಡಲು'ದಿವಾನ್-ಇ-ರಿಯಾಸತ್' ಎಂಬ ಇಬ್ಬರು ಅಧಿಕಾರಿಗಳನ್ನು ನೇಮಿಸಿದ್ದನು. ಈ ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ಬಹಳ ನಿಷ್ಠೆ, ಪ್ರಾಮಾಣಿಕತೆಗಳಿಂದ ನಿರ್ವಹಿಸುತ್ತಿದ್ದರು.[17]ಹೀಗಾಗಿ ಯಾವುದೇ ವ್ಯಾಪಾರಿಗಳು, ವರ್ತಕರು ಇಲ್ಲಿ ತಾವು ಮಾರಾಟ ಮಾಡುವ ಮೊದಲು ತಮ್ಮ ಸ್ವಯಂ ವಿಳಾಸದ ವಿವರ ಹಾಗೂ ವ್ಯಾಪಾರ ಮಾಡುವ ಸರಕುಗಳ ಹೆಸರುಗಳನ್ನು ಮೇಲೆ ನೇಮಿಸಿದ ಅಧಿಕಾರಿಗಳ ನೋಂದಾಯಿಸಕೊಳ್ಳಬೇಕಿತ್ತು. ಮಾತ್ರವಲ್ಲದೆ ಅಧಿಕಾರಿಗಳು ನಿಗಧಿ ಮಾಡಿದ ಬೆಲೆಗಳಿಗೆ ತಮ್ಮ ಸರಕುಗಳನ್ನು ಮಾರಾಟ ಮಾಡಬೇಕಿತ್ತು. ಜೊತೆಗೆ ಅಮೀರರು, ಮಲ್ಲಿಕರುಗಳು ಯಾವುದೇ ದುಬಾರಿ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಕೊಳ್ಳಬೇಕಾದರೆ ದಿವಾನ್-ಇ-ರಿಯಾಸತ್‌ನ ಅನುಮತಿಯನ್ನು ಪಡೆಯಬೇಕಿತ್ತು. ವ್ಯಾಪಾರಿಗಳು ಕೊಳ್ಳುವವರಿಗೆ ತೂಕ ಮತ್ತು ಅಳತೆ ಪ್ರಮಾಣಗಳಲ್ಲಿಯಾವುದೇ ರೀತಿಯ ಮೋಸ, ವಂಚನೆಗಳನ್ನು ಮಾಡುವಂತಿರಲಿಲ್ಲ.[18]ಇವರ ಈ ಚಟುವಟಿಕೆಗಳ ಮೇಲೆ ಕಣ್ಣಾವಲಿಡಲು ಷಹನಾ, ಬರೀದ್ ಎಂಬ ಗುಪ್ತಚರ ವರದಿಗಾರರನ್ನು ನೇಮಿಸಲಾಗಿತ್ತು.[19]ಇವರು ನೀಡಿದ ವ್ಯಾಪಾರಿಗಳ ತೂಕದಲ್ಲಾದ ಮೋಸದ ಬಗ್ಗೆಗಿನ ಗುಪ್ತಚರ ಮಾಹಿತಿ ಸಾಬೀತಾಗಿದ್ದರೆ, ಅಷ್ಟೇ ಪ್ರಮಾಣದ ಅವರ ದೇಹದ ಮಾಂಸವನ್ನು ತೂಕವಾಗಿ ತೆಗೆದುಕೊಳ್ಳುವ ಘನವಾದ ಶಿಕ್ಷೆಯನ್ನು ನೀಡಿ ಇವರ ಮೋಸ ಪುನರಾವರ್ತನೆಯಾಗದಂತೆ ಮಾಡುತ್ತಿದ್ದರು.[20]ಒಟ್ಟಾರೆಯಾಗಿ ಅಲ್ಲಾವುದೀನ್ ಖಿಲ್ಜಿಯ ನಿಯಂತ್ರಿತ ಮಾರುಕಟ್ಟೆ ಸುಧಾರಣಾ ಕಾಯ್ದೆಯು ಈ ರೀತಿಯ ನೀತಿನಿಯಮಗಳನ್ನು ಪಾಲಿಸಿಕೊಂಡು ಇಂದು ಕೂಡ ನೆನಪಿನಲ್ಲಿ ಉಳಿಯುವಂತೆ ಮಾಡಿದೆ. ಹೀಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಇದರ ಅರಿವಿದ್ದುದ್ದರಿಂದ ಈ ವ್ಯವಸ್ಥೆಯ ಕೆಲವು ತುಣುಕುಗಳನ್ನು ತಮ್ಮ ಆಡಳಿತದಲ್ಲಿ ಚಾಲನೆಗೆ ತರಲು ಪ್ರಯತ್ನಿಸಿದರು.

- **ಸಂಸ್ಥಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆ:**

ನಾಲ್ವಡಿಯವರು ಶೈಕ್ಷಣಿಕವಾಗಿ ದೇಶೀಯ ಹಾಗೂ ಪಾಶ್ಚಿಮಾತ್ಯ ಶಿಕ್ಷಣವನ್ನುಉತ್ತಮವಾಗಿ ಪಡೆದಿದ್ದರಿಂದ ಇವರಿಗೂ ಅಲ್ಲಾವುದ್ದೀನ್ ಖಿಲ್ಜಿಯ ನಿಯಂತ್ರಿತ ಮಾರುಕಟ್ಟೆಯ ಪರಿಕಲ್ಪನೆಯ ತಿರುಳುತಿಳಿದಿದ್ದರಿಂದ ಆ ವ್ಯವಸ್ಥೆಯ ಕೆಲವು ನಿಯಮಗಳನ್ನು ತಮ್ಮ ಮಾರುಕಟ್ಟೆ ಪದ್ಧತಿಯಲ್ಲಿ ಕಾರ್ಯಗತಗೊಳಿಸಲು ಮುಂದಾದರು. ಇದೇ ಸಂದರ್ಭದಲ್ಲಿ ಯೂರೋಪಿನ ಪ್ರವಾಸ ಕೈಗೊಂಡು ಲಂಡನ್, ಫ್ರಾನ್ಸ್, ಜರ್ಮನಿ, ಇಟಲಿ, ಹಾಲೆಂಡ್ ಹಾಗೂ ಸ್ವಿಡ್ಜರ್‌ಲ್ಯಾಂಡ್ ದೇಶಗಳಿಗೆ ಭೇಟಿಕೊಟ್ಟಿದ್ದರು. ಆಗ ಅಲ್ಲಿನ ಮಾರುಕಟ್ಟೆಗಳು ವಿಸ್ತಾರವಾದ ಪ್ರದೇಶಗಳಲ್ಲಿ ವ್ಯವಸ್ಥಿತವಾಗಿ

ಸ್ಥಾಪನೆಯಾಗಿದ್ದನ್ನು ಗಮನಿಸಿದರು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಮೈಸೂರಿನ ನಗರಗಳಲ್ಲೂ ಇದೇ ರೀತಿಯ ಸೌಲಭ್ಯಗಳನ್ನೊಳಗೊಂಡ ಮಾರುಕಟ್ಟೆಗಳನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿದ್ದರು. ನಾಲ್ವಡಿಯವರ ಈ ಆಲೋಚನೆಗೆ ಮತ್ತೊಂದು ಬಲವಾದ ಕಾರಣವೆಂದರೆ ಸ್ಥಳೀಯ ವ್ಯಾಪಾರ ಕೇಂದ್ರಗಳಲ್ಲಿ ರೈತರಿಗೆ, ಗ್ರಾಹಕರಿಗೆ ವ್ಯಾಪಾರಿಗಳು, ವರ್ತಕರುಗಳಿಂದಾಗುತ್ತಿದ್ದ ತೊಂದರೆ, ಮೋಸ ಮತ್ತು ಅಸಮತೋಲನದ ವ್ಯಾಪಾರ ಚಟುವಟಿಕೆಗಳು. ಇವುಗಳನ್ನು ಕೆಳಕಂಡ ಅಂಶಗಳಿಂದ ತಿಳಿದುಕಳ್ಳಬಹುದು. ಅವುಗಳೆಂದರೆ,

1. ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ವರ್ತಕರುಗಳು ಹಾಗೂ ಮಧ್ಯವರ್ತಿಗಳಿಂದ ಸರಿಯಾದ ಬೆಲೆ ಸಿಗುತ್ತಿರಲಿಲ್ಲ.
2. ವರ್ತಕರುಗಳು ರೈತರಿಂದ ಆಹಾರ ಪದಾರ್ಥಗಳು, ಹಣಕಾಸಿನ ಬೆಳೆಗಳು, ತೋಟಗಾರಿಕಾ ಬೆಳೆಗಳನ್ನು ಕಡಿಮೆ ಬೆಲೆಗೆ ಕೊಂಡು ಇನ್ನಿತರರ ಬಳಿ ಮಾರಾಟ ಮಾಡಿ ಅತ್ಯಧಿಕ ಲಾಭ ಗಳಿಸುತ್ತಿದ್ದರು.
3. ಸ್ಥಳೀಯ ವ್ಯಾಪಾರ ಕೇಂದ್ರಗಳಲ್ಲಿ ದಿನಬಳಕೆಯ ವಸ್ತುಗಳ ಅನಧಿಕೃತವಾದ ಬೆಲೆಗಳ ಏರಿಳಿತ.
4. ಕೃಷಿ ಪದಾರ್ಥಗಳಲ್ಲಿ ಕಲಬೆರಕೆ ಮಾಡುವುದು.
5. ವ್ಯಾಪಾರಿಗಳಿಂದ ತೂಕ ಮತ್ತು ಅಳತೆಮಾಪನಗಳಲ್ಲಿನ ವೈರುಧ್ಯತೆ.
6. ವರ್ತಕರು ಹಾಗೂ ರೈತರ ನಡುವೆ ಮಾರುಕಟ್ಟೆಯಲ್ಲಿನ ಬೆಲೆಗಳ ಏರುಪೇರಿನ ಹಿನ್ನೆಲೆಯಲ್ಲಿ ಉಂಟಾಗುತ್ತಿದ್ದ ಕಲಹಗಳು ಮುಂತಾದವುಗಳು ಪ್ರಮುಖವಾದವುಗಳು.[21]

ಇವುಗಳನ್ನು ಬಹಳ ಜಾಗರೂಕತೆಯಿಂದ ಗಮನಿಸಿದ ನಾಲ್ವಡಿಯವರು ಮಾರುಕಟ್ಟೆಗಳಲ್ಲಿನ ಈ ಬಗೆಯ ಅನಿಶ್ಚಿತತೆಯನ್ನು ಹೋಗಲಾಡಿಸಿ ಉತ್ಪಾದನೆಯ ಫಲ ನೇರವಾಗಿ ರೈತರಿಗೆ ತಲುಪುವಂತೆ ಮಾಡದಿದ್ದರೆ ಇವರ ಆರ್ಥಿಕತೆಯು ಕ್ಷೀಣಿಸುತ್ತದೆ ಎಂಬುದನ್ನು ತಿಳಿದರು. ಇದಕ್ಕನುಗುಣವಾಗಿ 1928ರಲ್ಲಿ 'ರಾಯಲ್ ಕಮಿಷನ್' ಹಾಗೂ 'ಪ್ರಾವಿನ್ಸಿಯಲ್ ಬ್ಯಾಂಕಿಂಗ್ ಕಮಿಟಿ'ಗಳ ಸಭೆಯನ್ನು ಕರೆದು ಚರ್ಚಿಸಿ, ಸಂಸ್ಥಾನದಲ್ಲಿ ಮಾರುಕಟ್ಟೆ ವ್ಯವಸ್ಥೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತಾಗಿ ವರದಿ ಸಲ್ಲಿಸುವಂತೆ ತೀರ್ಮಾನಿಸಲಾಯಿತು. ಅಂತಿಮವಾಗಿ ಇವುಗಳು ಸಲ್ಲಿಸಿದ ವರದಿಯಲ್ಲಿ ಮಾರುಕಟ್ಟೆಗಳಲ್ಲಿನ ನಡೆಯುತ್ತಿದ್ದ ನಿಯಮಬಾಹಿರ ಚಟುವಟಿಕೆಗಳು ಸಾಬೀತಾಯಿತು. ಜೊತೆಗೆ 'ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್' ಎಂಬ ಸಂಸ್ಥೆಯು 1935ರಲ್ಲಿ ಮೈಸೂರು ಸಂಸ್ಥಾನದಲ್ಲಿನ ಮಾರುಕಟ್ಟೆ ವ್ಯವಸ್ಥೆಯ ಬಗ್ಗೆ ಸಮೀಕ್ಷೆಯನ್ನು ನಡೆಸಿತು. ಈ ಸಮೀಕ್ಷೆಯು ಮೈಸೂರಿನ ವಿವಿಧ ಕೃಷಿ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಒದಗಿಸುವ ಮೂಲಕ ರೈತರಿಗೆ ಉತ್ತಮ ಪ್ರತಿಫಲ

ದೊರೆಯುವಂತೆ ಮಾಡಬೇಕೆಂದು ತಿಳಿಸಿತು. ಅಲ್ಲದೆ ಸ್ಥಳೀಯ ಮಾರುಕಟ್ಟೆಯಲ್ಲಿನ ನ್ಯೂನ್ಯತೆಗಳನ್ನು ಹೋಗಲಾಡಿಸಿ ರೈತಪರ ಸುಧಾರಣೆಗಳನ್ನು ಜಾರಿಗೊಳಿಸಬೇಕೆಂದು ತಿಳಿಸಿತು.[22]ಜೊತೆಗೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಕೂಡ ರಾಜ್ಯದ ಪ್ರಮುಖ ಸ್ಥಳಗಳಲ್ಲಿ ಕೃಷಿ ಮಾರುಕಟ್ಟೆಗಳನ್ನು ಸ್ಥಾಪಿಸಬೇಕೆಂದು ನಾಲ್ವಡಿಯವರಿಗೆ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಬೇಡಿಕೆ ಸಲ್ಲಿಸಿದರು. ಇದರ ಪರಿಣಾಮವಾಗಿ ರೈತರ ಸಮಸ್ಯೆಗಳನ್ನು ಹೋಗಲಾಡಿಸಲು ಜಾರಿಗೆ ಬಂದ ಸುವ್ಯವಸ್ಥಿತ ಕಾಯ್ದೆಯೇ 'ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆ'.

- **ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆ (1939):**

ಮೈಸೂರು ವ್ಯವಸಯೋತ್ಪನ್ನ ಮಾರುಕಟ್ಟೆಯು ಮೇಲ್ಕಾಣಿಸಿದ ಪ್ರಯತ್ನಗಳ ಫಲವಾಗಿ 1939ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ರೈತಪರ ಕಳಕಳಿಯುಕ್ತ ಕಾಳಜಿಯಿಂದಜಾರಿಗೆ ಬಂದಿತು. ಇದಕ್ಕೆ ನಿಯಂತ್ರಿತ ಮಾರುಕಟ್ಟೆ ಎಂತಲೂ ಕರೆಯಲಾಗುತ್ತಿತ್ತು. 'ವ್ಯಾಪಾರವನ್ನು ವಿಧಿವತ್ತಾದ ನಿಯಮಗಳಿಗೊಳಪಡಿಸಿ ದುಡಿಯುವ ರೈತನಿಗೆ ಉತ್ಪಾದಿತ ಫಲ ನ್ಯಾಯವಾಗಿ ದೊರೆಯುವಂತೆ ಮಾಡಲು ಸರ್ಕಾರ ಕೈಗೊಂಡ ಯೋಜನೆಯೇ ನಿಯಂತ್ರಿತ ಮಾರುಕಟ್ಟೆ' ಎಂಬುದು ಈ ಕಾಯ್ದೆಯ ವ್ಯಾಖ್ಯಾನವಾಗಿದೆ. ಈ ಕಾಯ್ದೆಯ ಅಡಿಯಲ್ಲಿ ಪ್ರಾರಂಭಗೊಂಡ ನಿಯಂತ್ರಿತ ಮಾರುಕಟ್ಟೆಯು ಯೋಗ್ಯ ಬೆಲೆ, ಪ್ರಾಮಾಣಿಕ ತೂಕ, ಅನಾವಶ್ಯಕ ಕಡಿತಗಳ ನಿರ್ಬಂದನೆ ಎಂಬ ಮೂಲತತ್ವಗಳ ಆಧಾರಗಳ ಮೇಲೆ ರಚನೆಯಾಗಿತ್ತು.[23] ಜೊತೆಗೆ ಇದು ತನ್ನದೇ ಆದ ಧ್ಯೇಯೋದ್ದೇಶಗಳನ್ನು ಹೊಂದಿತ್ತು. ಅವುಗಳೆಂದರೆ,

1. ಈ ಕಾಯ್ದೆಯ ಪ್ರಕಾರ ಪ್ರತಿಯೊಂದು ನಿಯಂತ್ರಿತ ಮಾರುಕಟ್ಟೆಯು ಒಂದು 'ಮಾರುಕಟ್ಟೆ ಸಮಿತಿ'ಯನ್ನು ಹೊಂದಿರಬೇಕಿತ್ತು.
2. ಮಾರುಕಟ್ಟೆ ಸಮಿತಿಯಲ್ಲಿ 12ರಿಂದ16 ಮಂದಿ ಸದಸ್ಯರಿದ್ದು ಅರ್ಧದಷ್ಟು ಸದಸ್ಯರು ಕೃಷಿ ಉತ್ಪನ್ನಗಳ ಉತ್ಪಾದಕರಾಗಿರಬೇಕಿತ್ತು.
3. ನಿಯಂತ್ರಿತ ಮಾರುಕಟ್ಟೆಗೆ ಪ್ರಕ್ರಿಯೆಗಳಿಗೆ ಅನುಕೂಲವಾದ ಸ್ಥಳವನ್ನು ಒದಗಿಸಿಕೊಡುವುದು.
4. ರೈತರು ಹಾಗೂ ವ್ಯಾಪಾರಗಾರರು, ಸ್ಥಳೀಯ ಪ್ರಾತಿನಿಧ್ಯವುಳ್ಳ ಸದಸ್ಯರನ್ನೊಳಗೊಂಡ ಸಮಿತಿಯನ್ನು ನಿಯಂತ್ರಿತ ಮಾರುಕಟ್ಟೆಯ ನಿರ್ವಹಣೆಗಾಗಿ ನೇಮಿಸುವುದು.
5. ನಿಯಂತ್ರಿತ ಮಾರುಕಟ್ಟೆಯ ವ್ಯಾಪಾರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನಿಖರವಾದ ಲೆಕ್ಕಪತ್ರಗಳನ್ನು ವ್ಯವಸ್ಥಿತವಾಗಿಡುವುದು.

6. ನಿಯಂತ್ರಿತ ಮಾರುಕಟ್ಟೆಗಳಲ್ಲಿ ಅಧೀಕೃತವಾಗಿ ಕಾರ್ಯನಿರ್ವಹಿಸುವವರಿಗೆ ವ್ಯವಹಾರ ಮಾಡುವವರು ಕಡ್ಡಾಯವಾಗಿ ಪರವಾನಗಿ ಪತ್ರಗಳನ್ನು ಪಡೆದುಕೊಳ್ಳುವುದು.
7. ಮಾರುಕಟ್ಟೆ ಸಮಿತಿಯು ರೈತರು ಹಾಗೂ ವ್ಯಾಪಾರಗಾರರು, ಖರೀದಿಸುವವರ ನಡುವೆ ವ್ಯಾಪಾರದ ಕುರಿತಾಗಿ ಕಲಹಗಳುಂಟಾದಾಗ ನಿಷ್ಪಕ್ಷಪಾತವಾಗಿ ಬಗೆಹರಿಸಬೇಕಿತ್ತು.
8. ಏಕರೂಪದ ತೂಕ ಮತ್ತು ಅಳತೆಗಳು ಮಾರುಕಟ್ಟೆ ಸಮಿತಿಯಿಂದ ದೃಢೀಕರಿಸಲ್ಪಡಬೇಕಿತ್ತು.
9. ನಿಯಂತ್ರಿತ ಮಾರುಕಟ್ಟೆಗಳಲ್ಲಿ ಕಾಯ್ದೆಯನ್ನು ಉಲ್ಲಂಘಿಸಿ ದುರ್ನಡತೆಯಿಂದ ವರ್ತಿಸಿದರೆ 500/- ರೂಪಾಯಿಗಳವರೆಗೂ ದಂಡವನ್ನು ವಿಧಿಸಿ ವಸೂಲಿ ಮಾಡುವುದು.
10. ಯಾವುದೇ ವ್ಯಕ್ತಿ ಅನಧೀಕೃತವಾಗಿ ವ್ಯಾಪಾರಿ ಸವಲತ್ತುಗಳನ್ನು ಪಡೆದುಕೊಂಡರೆ ಅವರಿಗೆ 200/- ರೂಪಾಯಿಗಳವರೆಗೂ ದಂಡ ಮತ್ತು ಶಿಕ್ಷೆಗೆ ಗುರಿಪಡಿಸುವುದು.
11. ನಿಯಂತ್ರಿತ ಮಾರುಕಟ್ಟೆಗಳಲ್ಲಿ ವಸ್ತುನಿಷ್ಠ ಮತ್ತು ಪಾರದರ್ಶಕತೆಯನ್ನು ಜಾರಿಗೊಳಿಸುವುದು ಮುಂತಾದವು ಪ್ರಮುಖವಾದವುಗಳು.[24]

ಒಟ್ಟಾರೆ ಈ ಕಾಯ್ದೆಯು ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆಯನ್ನು ಸುಧಾರಿಸಿತ್ತಲ್ಲದೆ ರೈತರುಗಳು ಮಾರುಕಟ್ಟೆಯ ದಲ್ಲಾಳಿಗಳು, ಮಧ್ಯವರ್ತಿಗಳು, ಹಣಲೇವಾದೇವಗಾರರಿಂದ ಶೋಷಣೆಗೊಳಗಾಗುವುದನ್ನು ತಪ್ಪಿಸಿತು. ಅಲ್ಲದೆ ಕೃಷಿ ಉತ್ಪಾದಕರ ಉತ್ಪನ್ನಗಳಿಗೆ ಉತ್ತಮ ಬೆಂಬಲ ಬೆಲೆ ಸಿಗುವಂತೆ ಮಾಡುವ ಮೂಲಕ ಕೃಷಿ ಆಧುನೀಕರಣದ ಫಲವು ರೈತರಿಗೆ ಸಿಕ್ಕಿ ಅವರ ಜೀವನಮಟ್ಟವು ವೃದ್ಧಿಗೊಳ್ಳುವಂತೆ ಮಾಡಿತು.

- **ಪರಿಸಮಾಪ್ತಿ:**

ನಾಲ್ವಡಿಯವರ ಆರಂಭಿಸಿದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಇಂದು ರಾಜ್ಯದ ಎಲ್ಲಾ ಕಡೆಯೂ ಪಸರಿಸಿದ್ದು, ರೈತರು ಬೆಳೆದ ಜನೋಪಯೋಗಿ ಫಸಲುಗಳು ಸಾರ್ವಜನಿಕರಿಗೆ ನೇರವಾಗಿ ತಲುಪುವಂತೆ ಮಾಡಿವೆ. ಅಲ್ಲದೆ ಸಮಿತಿಯ ವತಿಯಿಂದ ರೈತರು ಸರಬರಾಜು ಮಾಡುವ ಕೃಷಿಯಾಧರಿತ ಪದಾರ್ಥಗಳಿಗೆ ಬೇಡಿಕೆ, ಭದ್ರತೆ, ನಿಖರವಾದ ಬೆಲೆ, ದಾಖಲು ಪುಸ್ತಕಗಳು, ಪರಿಹಾರಗಳು, ಮಧ್ಯವರ್ತಿಗಳು ಅಥವಾ ದಲ್ಲಾಳಿಗಳ ಉಪಟಳಗಳ ನಿಯಂತ್ರಣ ಮುಂತಾದ ಉಪಯೋಗಗಳು ಇಂದು ಲಭಿಸುತ್ತಿದೆ. ಜೊತೆಗೆ ಕರ್ನಾಟಕ ಸರ್ಕಾರವು'ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ'ದ ಮೂಲಕ ರಾಜ್ಯಾದಾದ್ಯಂತ ರೈತರು ಕೃಷಿ ಭೂಮಿಯಲ್ಲಿ ಬೆಳೆಯುತ್ತಿರುವ ಬೆಳೆಗಳನ್ನು ಸಮೀಕ್ಷೆ ಮಾಡಿಸಿ, ನೈಸರ್ಗಿಕ ವಿಕೋಪಗಳ ಸಂದರ್ಭಗಳಲ್ಲಿ ರೈತರ ಬೆಳೆಗಳು ನಾಶವಾದರೆ ಅವುಗಳಿಗೆ ಪರಿಹಾರ ನೀಡುವ ಕೆಲಸವನ್ನು ಮಾಡುತ್ತಿದೆ. ಇಷ್ಟೆಲ್ಲಾ ಸರ್ಕಾರದ ವತಿಯಿಂದ

ನಡೆಯುತ್ತಿದ್ದರೂ, ದಿನದಿಂದ ದಿನಕ್ಕೆ ರೈತರ ಆತ್ಮಹತ್ಯೆಗಳ ಸರಣಿ ಸಾಲಿನಲ್ಲಿ ನಡೆಯುತ್ತಲೇ ಇವೆ. ಇದಕ್ಕೆ ಪ್ರಮುಖ ಕಾರಣ ರೈತರು ಕೃಷಿ ಉತ್ಪಾದನಾ ಚಟುವಟಿಕೆಗಳಿಗೆ ಮಾಡುತ್ತಿರುವ ಸಾಲವೇ ಆಗಿದೆ. ಆದುದರಿಂದ ಸರ್ಕಾರ ಮತ್ತಷ್ಟು ಶಿಸ್ತುಕ್ರಮ ವಹಿಸಿ, ನೇಗಿಲಯೋಗಿಯ ಬೆವರಹನಿಯ ಬೆಳೆಗಳಿಗೆ ಆಕರ್ಷಕ ಬೆಲೆಗಳನ್ನು ನಿಗದಿಪಡಿಸಿ ದೊರೆಯುವಂತೆ ಮಾಡಬೇಕಾಗಿದೆ. ಜೊತೆಗೆ ರೈತರ ಸಾಲವನ್ನು ಮನ್ನಾ ಮಾಡಿ ಈ ಅನ್ನದಾತನ ಜೀವಕ್ಕೆ ಮತ್ತು ಜೀವನಕ್ಕೆ ಭದ್ರಬುನಾದಿಯನ್ನು ಒದಗಿಸಬೇಕಾಗಿದೆ.

- **ಕೊನೆಟಿಪ್ಪಣಿಗಳು:**


1. ಕನ್ನಡ ವಿಶ್ವಕೋಶ, ಸಂಪುಟ 13,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1998, ಪುಟ206.
2. Dictionary of the Social-Sciences, Pp407
3. Lelah Duskin, The Non-Brahmin Movement in Princely Mysore, 1974, Pp40-41
4. Vinay K. Behla, Ajanta Murals. New Delhi, 1943.
5. ಎಂ.ಎಸ್. ಅನಿತಾ, ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ (ಪರಿವರ್ತನಾಶೀಲ ಸಂಪ್ರದಾಯಬದ್ಧ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಒಂದು ಸಮಗ್ರ ಅಧ್ಯಯನ 1884–1940), ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, 2012, ಪುಟ214.
6. ಹೆಚ್.ಎಸ್. ಗೋಪಾಲರಾವ್ ಮತ್ತು ಜಯದೇವರಾಜ ಅರಸರು, ಕರ್ನಾಟಕ ಜನಪದ ಮಾರುಕಟ್ಟೆಗಳು, ಲೇಖಕರ ನುಡಿ, ಪುಟIII.
7. Francies Bukanan, A journey from Madras through the countries of Mysore, Canara and Malabar, Vol.1, Pp187.
8. ಎಂ.ಎಸ್. ಅನಿತಾ, ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ (ಪರಿವರ್ತನಾಶೀಲ ಸಂಪ್ರದಾಯಬದ್ಧ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಒಂದು ಸಮಗ್ರ ಅಧ್ಯಯನ 1884–1940), ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, 2012, ಪುಟ214.
9. Lelah Duskin, The Non-Brahmin Movement in Princely Mysore, 1974, Pp47-50.
10. ಎಂ.ಎಸ್. ಅನಿತಾ, ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ (ಪರಿವರ್ತನಾಶೀಲ ಸಂಪ್ರದಾಯಬದ್ಧ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಒಂದು ಸಮಗ್ರ ಅಧ್ಯಯನ 1884–1940), ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, 2012, ಪುಟ215.
11. ಶಿವಕುಮಾರಸ್ವಾಮಿ ಸಿ.ಎಸ್., ಕರ್ನಾಟಕದ ಜಾತ್ರೆಗಳು, 1988, ಪುಟ14–70.

12. ಮಳಲಿ ವಸಂತಕುಮಾರ, ಹಾಸನ ಜಿಲ್ಲೆಯ ಜಾತ್ರೆಗಳು, 1988, ಪು35, 137.

13. ಎಂ.ಎಸ್. ಅನಿತಾ, ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ (ಪರಿವರ್ತನಾಶೀಲ ಸಂಪ್ರದಾಯಬದ್ಧ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಒಂದು ಸಮಗ್ರ ಅಧ್ಯಯನ 1884–1940), ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, 2012, ಪುಟ215.

14. ಮೈಸೂರು ದರ್ಶನ, ಸಂಪುಟ2, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, 2011, ಪುಟ.50.

15. S.C. Roychoudhary, of Medieval India, Surjeet Publications, New Delhi, 2011, Pp 114.

16. Ishwari Prasad, History of Medieval India, Surjeet Publications, New Delhi, 2014, Pp 184.

17. Ibid…..,Pp186.

18. Ibid……..

19. S.C. Roychoudhary,History of Medieval India, Surjeet Publications, New Delhi, 2011, Pp 114.

20. Ishwari Prasad, History of Medieval India, Surjeet Publications, New Delhi, 2014, Pp 187.

21. ಹೆಚ್.ಜೆ. ರೂಪ, ವಸಾಹತುಶಾಹಿ ಮೈಸೂರು ರಾಜ್ಯದಲ್ಲಿ ಕೃಷಿ, ಮಾರುಕಟ್ಟೆ ಮತ್ತು ಸಾಲ, ಸಂಶೋಧನಾ ಪ್ರಬಂಧ, 2013, ಪುಟ139.

22.ಎಂ.ಎಸ್. ಅನಿತಾ, ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ (ಪರಿವರ್ತನಾಶೀಲ ಸಂಪ್ರದಾಯಬದ್ಧ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಒಂದು ಸಮಗ್ರ ಅಧ್ಯಯನ 1884–1940), ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, 2012, ಪುಟ.221–222.

22. C. Hayavadan Rao, Mysore Gezetteer, Vol.V, Pp357.

23. ಹೆಚ್.ಜೆ.ರೂಪ,ವಸಾಹತುಶಾಹಿ ಮೈಸೂರು ರಾಜ್ಯದಲ್ಲಿ ಕೃಷಿ,ಮಾರುಕಟ್ಟೆ ಮತ್ತು ಸಾಲ, ಸಂಶೋಧನಾ ಪ್ರಬಂಧ, 2013, ಪುಟ143.